C.C.No.1245/2022
PW-2 CW-2

<u>ದಿನಾಂಕಃ 20-02-2025 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ 5 ನೇ ಆರೋಪಿ ಪರಃ ಶ್ರೀ ಎಸ್.ಆರ್.ಎಂ. ವಕೀಲರಿಂದಃ-</u>

ದಿಃ16.09.2019 ರಂದು ಪೊಲೀಸರು ನನಗೆ ಫೋನ್ ಮಾಡಿ ಠಾಣೆಗೆ ಬರುವಂತೆ ತಿಳಿಸಿದರು. ಆ ರೀತಿ ಫೋನ್ ಕರೆ ಮಾಡಿದಾಗ ತಮಗೆ ಇದ್ದ ಮಾಹಿತಿ ಬಗ್ಗೆ ನನಗೆ ತಿಳಿಸಿರುತ್ತಾರೆ. ನಿಮಗೆ ನೇರವಾಗಿ ಫೋನ್ ಕರೆ ಮಾಡಿದ್ದರೋ ಅಥವಾ ನಿಮ್ಮ ಫ್ರಾಂಶುಪಾಲರಿಗೆ ಮಾಹಿತಿ ಕೊಟ್ಟು ಅವರ ಮುಖಾಂತರ ನಿಮಗೆ ತಿಳಿಸಿದ್ದರೋ ಎಂದರೆ ಸಾಕ್ಷಿ ಆ ದಿನ ನಾನೇ ಪ್ರಭಾರೆ ಫ್ರಾಂಶುಪಾಲರಾಗಿದ್ದೆ ಎನ್ನುತ್ತಾರೆ. ನಾನು ಕಾಲೇಜಿನಲ್ಲಿ ಇದ್ದಾಗ ಪೊಲೀಸರು ನನಗೆ ಪತ್ರಾಂಕಿತ ಅಧಿಕಾರಿಯಾಗಿ ಬರುವಂತೆ ಲಿಖಿತ ನೋಟೀಸ್ ಕೊಟ್ಟಿಲ್ಲ, ಸಾಕ್ಷಿ ಮುಂದುವರಿದು ಫೋನ್ ಮುಖಾಂತರ ತಿಳಿಸಿದರು ನಾನು ಠಾಣೆಗೆ ಬಂದ ನಂತರ ನೋಟೀಸ್ ಕೊಟ್ಟರು ಎನ್ನುತ್ತಾರೆ. ಪೊಲೀಸರು ಆ ದಿನ ನನಗೆ 03.30 ಗಂಟೆಗೆ ಫೋನ್ ಕರೆ ಮಾಡಿದ್ದರು. ನನಗೆ ಠಾಣೆಯಿಂದ ಪೊಲೀಸ್ ನಿರೀಕ್ಷಕರು ಫೋನ್ ಕರೆ ಮಾಡಿದ್ದರು. ನನಗೆ ಫೋನ್ ಕರೆ ಮಾಡಿದವರು ನಗರ ಪೋಲೀಸ್ ಠಾಣೆಗೆ ಬರಲು ತಿಳಿಸಿದರು. ನಿಮಗೆ ಎಷ್ಟು ಗಂಟೆಗೆ ಪೊಲೀಸ್ ಠಾಣೆಗೆ ಬರಲು ತಿಳಿಸಿದರು ಎಂದರೆ ಸಾಕ್ಷಿ ನಾನು ನಗರ ಪೊಲೀಸ್ ಠಾಣೆಗೆ 04.20 ಗಂಟೆಗೆ ಹೋದೆ ಎನ್ನುತ್ತಾರೆ. ನಿಮ್ಮ ಜೊತೆ ನಿಮ್ಮ ಸಿಬ್ಬಂದಿಗಳನ್ನ ಸಹ ಬರಲು ತಿಳಿಸಿದರಾ ಎಂದರೆ ಸಾಕ್ಷಿ ನನಗೆ ಬರುವಂತೆ ಕರೆದರು ಎನ್ನುತ್ತಾರೆ. ಠಾಣೆಗೆ ಹೋಗುವ ಪೂರ್ವದಲ್ಲಿ ನಿಮ್ಮ ಮೇಲಾಧಿಕಾರಿಗಳ ಅನುಮತಿ ಪಡೆದು ಹೋಗಿರುತ್ತೀರಾ ಎಂದರೆ ಸಾಕ್ಷಿ ಆ ದಿನ ನಾನೇ ಪ್ರಭಾರೆ ಫ್ರಾಂಶುಪಾಲರಾಗಿದ್ದರಿಂದ ಅನುಮತಿ ಪಡೆಯುವ

ಅವಶ್ಯಕತೆ ಇರಲಿಲ್ಲ ಎನ್ನುತ್ತಾರೆ. ನಿಮ್ಮ ಸಿಬ್ಬಂದಿಗಳನ್ನ ಸಾಕ್ಷಿದಾರರಾಗಿ ಕಳುಹಿಸಿದ ಸಂಬಂಧ ಆದೇಶ ಮಾಡಿರುತ್ತೀರಾ ಎಂದರೆ ಸಾಕ್ಷಿ ನಾವು 04.20 ಗಂಟೆಗೆ ಹೋಗಿದ್ದರಿಂದ ಪ್ರತ್ಯೇಕ ಆದೇಶ ಹೊರಡಿಸುವ ಅವಶ್ಯಕತೆ ಇರಲಿಲ್ಲ ಎನ್ನುತ್ತಾರೆ. ನಿಮ್ಮ ಕಾಲೇಜಿನ ಅವಧಿ ಎಷ್ಟು ಎಂದರೆ ಸಾಕ್ಷಿ ಬೆಳಗ್ಗೆ:09.00 ರಿಂದ 04.00 ರವರೆಗೆ ಎನ್ನುತ್ತಾರೆ. ನಿಮ್ಮ ಕಾಲೇಜಿನ ಅವಧಿ ಬೆಳಗ್ಗೆ:10.00 ರಿಂದ 05.30 ಎಂದರೆ ಸರಿಯಲ್ಲ. ಬೆಳಗ್ಗೆ:10.00 ರಿಂದ 05.30 ರವರೆಗೆ ಕಾಲೇಜಿನ ಅವಧಿಯಾಗಿದ್ದರಿಂದ ನೀವು ಮೇಲಾಧಿಕಾರಿಗಳ ಅನುಮತಿ ಪಡೆಯಬೇಕಿತ್ತು ಮತ್ತು ಲಿಖಿತ ಆದೇಶ  ಹೊರಡಿಸಬೇಕಿತ್ತು ಎಂದರೆ ಸರಿಯಲ್ಲ. ನಾನು ಮತ್ತು ನಮ್ಮ ಸಿಬ್ಬಂದಿಗಳು ಸಂಜೆ:04.20 ಗಂಟೆಗೆ ಠಾಣೆಗೆ ಹೋದೆವು. ಠಾಣೆಗೆ ಹೋದಾಗ ಅಂಗಶೋಧನೆ ಮಾಡಿರುತ್ತೀರಾ ಎಂದರೆ ಸಾಕ್ಷಿ ನಾನೇ ಖುದ್ದಾಗಿ ನನ್ನ, ಮಹಜರ್ ಸಾಕ್ಷಿದಾರರ ಹಾಗೂ ದಾಳಿಗೆ ಭಾಗವಹಿಸಲು ತಯಾರಾಗಿದ್ದ ಪೊಲೀಸ್ ಸಿಬ್ಬಂದಿಗಳನ್ನ ಹಾಗೂ ವಾಹನವನ್ನ ಶೋಧನೆ ಮಾಡಿದೆ ಎನ್ನುತ್ತಾರೆ. ನಾನು ಶೋಧನೆಗೆ ಒಳಪಡಿಸಿದ ಪೊಲೀಸ್ ಜೀಪ್ ನೊಂದಣಿ ಸಂಖ್ಯೆ:ಕಎ-18/ಜಿ-1011 ಮತ್ತು ಕೆಎ-18/ಜಿ-1075 ಆಗಿದ್ದವು. ಅಂಗಶೋಧನೆ ಸಂಬಂಧ ಜರುಗಿಸಿದ ಮಹಜರ್ ಅನ್ನ ಸಂಜೆ:04.20 ರಿಂದ 05.00 ರವರೆಗೆ ಮಾಡಲಾಯಿತು. ಅಂಗಶೋಧನೆ ಮಹಜರ್ ಅನ್ನ ಠಾಣೆಯ ಮುಂಭಾಗದಲ್ಲಿ ಜರುಗಿಸಲಾಯಿತು. ಸದರಿ ಮಹಜರ್ ಕಾಲಕ್ಕೆ ಯಾರು ಯಾರು ಇದ್ದರು ಎಂದರೆ ಸಾಕ್ಷಿ ಪೊಲೀಸ್ ನಿರೀಕ್ಷಕರು ಮತ್ತು ಅವರ ಸಿಬ್ಬಂದಿಗಳು ಇದ್ದರು. ಸಾಕ್ಷಿ ಮುಂದುವರಿದು ಚಾಸಾ-1 ರವರ ಸಿಬ್ಬಂದಿಗಳ ಹೆಸರು ಈಗ ನೆನಪಿಲ್ಲ ಎನ್ನುತ್ತಾರೆ. ದಾಳಿ ಪೂರ್ವ ಮಹಜರ್ ಅನ್ನ ಕೈ ಬರವಣಿಗೆಯಲ್ಲಿ

ಮಾಡಲಾಯಿತು. ಚಾಸಾ-1 ರವರು ನನ್ನನ್ನ ಕರೆದಾಗ ಎ.ಐ.ಟಿ ಕಾಲೇಜಿನ ಬಾಯ್ಸ್ ಹಾಸ್ಟೇಲ್ ಪಕ್ಕದಲ್ಲಿ ಬೀಕನಹಳ್ಳಿಗೆ ಹೋಗುವ ಪಕ್ಕದಲ್ಲಿ ಗಾಂಜಾ ಮಾರಾಟ ಆಗುತ್ತಿದೆ ಅದನ್ನ ಭೇಧಿಸಬೇಕಾಗಿದೆ ಆದ್ದರಿಂದ ಪತ್ರಾಂಕಿತ ಅಧಿಕಾರಿಯಾಗಿ ಎಂದು ನನ್ನ ಬಳಿ ಕೇಳಿಕೊಂಡರು. ಠಾಣೆಯಿಂದ ಘಟನಾ ಸ್ಥಳಕ್ಕೆ ಹೋದಾಗ ಸಂಜೆಃ05.20 ಗಂಟೆ ಆಗಿತ್ತು. ಠಾಣೆಯಿಂದ 05.10 ಗಂಟೆಗೆ ಬಿಟ್ಟಿದ್ದೆವು. ಸ್ಥಳಕ್ಕೆ ಹೋದ ನಂತರ ಸುಮಾರು 30 ರಿಂದ 40 ನಿಮಿಷ ವೀಕ್ಷಣೆ ಮಾಡಿದೆವು. ಸಾಕ್ಷಿ ಮುಂದುವರಿದು 05.50 ರಿಂದ 05.55 ಗಂಟೆಯವರೆಗೆ ವೀಕ್ಷಣೆ ಮಾಡಿದೆವು ಎನ್ನುತ್ತಾರೆ. ನಾನು ಮತ್ತು ಪಂಚಸಾಕ್ಷಿಗಳು ಪೊಲೀಸರ ಜೀಪ್ ನಲ್ಲಿ  ಸ್ಥಳಕ್ಕೆ ಹೋದೆವು. ನಾನು ಸ್ಥಳಕ್ಕೆ ಜೀಪ್ ನೊಂದಣಿ ಸಂಖ್ಯೆಃಕೆಎ-18/ಜಿ-1075 ರಲ್ಲಿ ಹೋದೆ. ಚಾಸಾ-3 ಮತ್ತು ಚಾಸಾ-4 ರವರು ಜೀಪ್ ನೊಂದಣಿ ಸಂಖ್ಯೆಃಕೆಎ-18/ಜಿ-1011 ರಲ್ಲಿ ಸ್ಥಳಕ್ಕೆ ಬಂದರು. ನಾವು ಜೀಪ್ ನಿಲ್ಲಿಸಿದ ಸ್ಥಳದಿಂದ 50 ಮೀಟರ್ ದೂರದಲ್ಲಿ ಗ್ರೇ ಕಲರ್ ನ ಟಾಟಾ ಇಂಡಿಕಾ ಕಾರ್ ನಿಂತಿತ್ತು. ನಾವು ನೋಡಿದಾಗ 4 ಜನ ಆಸಾಮಿಗಳು ಸದರಿ ಕಾರ್ ನ ಒಳಗಡೆ ಕೂತಿದ್ದರು. ಪೊಲೀಸರು ದಾಳಿ ಮಾಡಿದಾಗ ಕಾರ್ ನಲ್ಲಿ ಇದ್ದ 4 ಜನರ ಪೈಕಿ 3 ಜನ ತಪ್ಪಿಸಿಕೊಂಡು ಓಡಿ ಹೋದರು, ಇನ್ನೊಬ್ಬ ಸಿಕ್ಕಿಬಿದ್ದ. ಪೊಲೀಸರು ಹಿಡಿದ ಆರೋಪಿ ಹೆಸರು ಮುಬಾರಕ್ ಎಂಬುದಾಗಿತ್ತು. ಓಡಿ ಹೋದ ಆರೋಪಿತರ ಹೆಸರನ್ನ ಪೊಲೀಸರು ಮುಬಾರಕ್ ಮುಖಾಂತರ ವಿಚಾರಿಸಿ ಬರೆದುಕೊಂಡರು. ಮುಬಾರಕ್ ಈತ ಕಾರಿನ ಚಾಲಕರ ಸೀಟ್ ನಲ್ಲಿ ಕೂತಿದ್ದ ಮತ್ತು ಆತ ಕಾರಿನಿಂದ ಇಳಿಯಲು ಪ್ರಯತ್ನಿಸುತ್ತಿದ್ದಾಗ ಪೊಲೀಸರು ಆತನನ್ನ ಹಿಡಿದರು. ಪೊಲೀಸ್ ಸಿಬ್ಬಂದಿಗಳು ಮುಬಾರಕ್ ಈತನನ್ನ ಹಿಡಿದರು.

ಮುಬಾರಕ್ ಈತನನ್ನ ಹಿಡಿದ ಪೊಲೀಸ್ ಸಿಬ್ಬಂದಿ ಈತನ ಹೆಸರು ನೆನಪಿಲ್ಲ. ಹಿಡಿದ ಆಸಾಮಿಯನ್ನ ಮೂರು ಜನ ಪೊಲೀಸ್ ಸಿಬ್ಬಂದಿಗಳು ಹಿಡಿದರು. ಮುಬಾರಕ್ ಈತನನ್ನ ಹಿಡಿದ ನಂತರ ನಾನು, ಪಂಚಸಾಕ್ಷಿಗಳು ಮತ್ತು ಇತರ ಪೊಲೀಸ್ ಸಿಬ್ಬಂದಿಗಳು ಕಾರ್ ಬಳಿ ಹೋದೆವು. ನಾನು, ಚಾಸಾ-1 ಮತ್ತು ಇತರರು ಸೇರಿ ಕಾರಿನ ಒಳಭಾಗ ಪರಿಶೀಲನೆ ಮಾಡಿದೆವು. ಸಾಕ್ಷಿ ಮುಂದುವರಿದು ಆನಂತರ ಡಿಕ್ಕಿ ತೆಗೆಸಿ ನೋಡಿದೆವು ಎನ್ನುತ್ತಾರೆ. ಸಾಕ್ಷಿ ಮುಂದುವರಿದು ಡಿಕ್ಕಿ ತೆಗೆಸಿದಾಗ ಅಲ್ಲಿ 2 ಪೌಚುಗಳು ಇದ್ದವು ಎನ್ನುತ್ತಾರೆ. ಕಾರಿನ ಕೀ ಯಾರ ಬಳಿ ಇತ್ತು ಎಂದರೆ ಸಾಕ್ಷಿ ಅದನ್ನ ನಾನು ಗಮನಿಸಿರುವುದಿಲ್ಲ ಎನ್ನುತ್ತಾರೆ, ಡಿಕ್ಕಿಯನ್ನ ಯಾರು ಓಪನ್ ಮಾಡಿದರು ಎಂದರೆ ಸಾಕ್ಷಿ ಮುಬಾರಕ್ ಈತನೇ ಡಿಕ್ಕಿ ತೆಗೆದ ಎನ್ನುತ್ತಾರೆ. ಡಿಕ್ಕಿ ಎಂದರೆ ಕಾರಿನ ಹಿಂಭಾಗ ಇದ್ದ ಭಾಗ ಆಗಿರುತ್ತದೆ. ಡಿಕ್ಕಿಯಲ್ಲಿ ಇದ್ದ 2 ಪೌಚುಗಳ ಪೈಕಿ ಒಂದು ಕೆಂಪು ಮತ್ತು ಮತ್ತೊಂದು ಬಿಳಿ ಬಣ್ಣದ್ದಾಗಿತ್ತು. ಯಾವ ಬ್ಯಾಗ್ ನಲ್ಲಿ ಎಲೆ, ಹೂವು, ಕಾಂಡ ಇತ್ತು ಎಂದರೆ ಸಾಕ್ಷಿ ಎರಡರಲ್ಲಿಯೂ ಇತ್ತು ಪೊಲೀಸರು ಮುಬಾರಕ್ ನನ್ನ ವಿಚಾರ ಮಾಡಿದಾಗ ಆತ ಗಾಂಜಾ ಇದೆ ಎಂದು ತಿಳಿಸಿದ ಅವುಗಳನ್ನ ತೂಕ ಮಾಡಿದಾಗ ಬಿಳಿ ಬ್ಯಾಗ್ ನಲ್ಲಿ ಇದ್ದ ಮಾಲು 390 ಗ್ರಾಂ. ಇತ್ತು ಮತ್ತು ಕೆಂಪು ಬ್ಯಾಗ್ ನಲ್ಲಿ ಇದ್ದ ಮಾಲು 330 ಗ್ರಾಂ ಇತ್ತು ಎನ್ನುತ್ತಾರೆ. ಕಾರಿನ ನೊಂದಣಿ ಸಂಖ್ಯೆಃಕೆಎ-18/ಪಿ-5155 ಆಗಿತ್ತು. ದಾಳಿ ಕಾಲಕ್ಕೆ ಮಾಲು ಗಾಂಜಾ ಎಂದು ದೃಡೀಕರಿಸಲು ಯಾರಾದರೂ ತಜ್ಞರನ್ನ ಕರೆದುಕೊಂಡು ಹೋಗಿದ್ದೀರಾ ಎಂದರೆ ಸಾಕ್ಷಿ ಮುಬಾರಕ್ ಈತನೇ ಮಾಲನ್ನ ಗಾಂಜಾ ಎಂದು ಹೇಳಿದ ಮತ್ತು ಪೊಲೀಸರೂ ಸಹ ಅದನ್ನ ಪರೀಕ್ಷಿಸಿ

ಅದು ಗಾಂಜಾ ಎಂದು ತಿಳಿಸಿದರು ಎನ್ನುತ್ತಾರೆ. ಮುಬಾರಕ್ ಮತ್ತು ಪೊಲೀಸರು ಕೆಂಪು ಮತ್ತು ಬಿಳಿ ಬ್ಯಾಗ್ ನಲ್ಲಿ ಇದ್ದ ಮಾಲು ಗಾಂಜಾ ಎಂದು ತಿಳಿಸಿದ್ದರಿಂದ ಅದು ಗಾಂಜಾ ಎಂದು ನನಗೆ ತಿಳಿಯಿತು ಎಂದರೆ ಸರಿ. ಗಾಂಜಾ ತೂಕ ಮಾಡಲು ಯಾವ ಸಾಧನವನ್ನ ಉಪಯೋಗಿಸಿದ್ದೀರಾ ಎಂದರೆ ಸಾಕ್ಷಿ ಪೊಲೀಸರು ತಮ್ಮ ಜೀಪ್ ನಲ್ಲಿ ಡಿಜಿಟಲ್ ತೂಕದ ಯಂತ್ರವನ್ನ ತಂದಿದ್ದರು ಎನ್ನುತ್ತಾರೆ. ದಾಳಿ ಪೂರ್ವದ ಮಹಜರ್ ಕಾಲಕ್ಕೆ ಜೀಪ್ ನಲ್ಲಿ ತೂಕದ ಯಂತ್ರ ಇದ್ದುದು ನನ್ನ ಗಮನಕ್ಕೆ ಬಂದಿಲ್ಲ. ಸ್ಥಳದಲ್ಲಿ ಬರೆದ ಮಹಜರ್ ಅನ್ನ ಪೊಲೀಸರೇ ಬರೆದರು. ಮಹಜರ್ ಬರೆದ ಪೊಲೀಸರ ಹೆಸರು ಈಗ ನೆನಪಿಲ್ಲ. ಮಹಜರ್ ಬರೆದ ಸ್ಥಳದ ಚೆಕ್ಕುಬಂಧಿ ಏನು ಎಂದರೆ ಸಾಕ್ಷಿ ನಾನು ದಿಕ್ಸೂಚಿ ತೆಗೆದುಕೊಂಡು ಹೋಗಿರಲಿಲ್ಲ ಆದರೆ ವಹಿತ ಬಲಗಡೆಗೆ ಎ.ಐ.ಟಿ ಕಾಲೇಜ್ ಇತ್ತು, ಎಡಗಡೆಗೆ ಬೇಲಿ ಮತ್ತು ಜಮೀನು ಇತ್ತು, ಮುಂದಕ್ಕೆ ಬೀಕನಹಳ್ಳಿಗೆ ಹೋಗುವ ರಸ್ತೆ ಮತ್ತು ಹಿಂದಕ್ಕೆ ಎ.ಐ.ಟಿ ಸರ್ಕಲ್ ಗೆ ಬರುವ ರಸ್ತೆ ಎನ್ನುತ್ತಾರೆ. ಮಹಜರ್ ನಲ್ಲಿ ಏನು ಚೆಕ್ಕುಬಂಧಿ ಬರೆಯಲಾಗಿದೆ ಎಂದರೆ ಸಾಕ್ಷಿ ಚೆಕ್ಕುಬಂಧಿಯನ್ನ ನೋಡಿಲ್ಲ ಆದರೆ ಉಳಿದ ವಿಚಾರವನ್ನ ನಾನು ಓದಿದ್ದೇನೆ ಎನ್ನುತ್ತಾರೆ. ಮಹಜರ್ ಬರೆದಾಗ ಸಂಜೆ:05.30 ರಿಂದ 06.30 ಗಂಟೆ ಆಗಿತ್ತು. ಮಹಜರ್ ಗೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನು, ನಮ್ಮ ಕಾಲೇಜಿನ ಇಬ್ಬರು ಸಿಬ್ಬಂದಿಗಳು ಸಹಿ ಮಾಡಿದ್ದೇವೆ, ಪೊಲೀಸ್ ಸಿಬ್ಬಂದಿಗಳ ಪೈಕಿ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಚಾಸಾ-1 ರವರು ನನಗೆ ಪರಿಚಯಸ್ಥರಾಗಿದ್ದು ಅವರ ಹೇಳಿಕೆ ಮೇರೆಗೆ ಕಛೇರಿ ಅವಧಿಯಲ್ಲಿ ದಾಳಿಗೆ

ಹೋಗಲಾಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಕಛೇರಿ ಅವಧಿಯಲ್ಲಿ ನಾನು ಹೇಳಿದಂತೆ ದಾಳಿಗೆ ಭಾಗವಹಿಸಲು ಮೇಲಾಧಿಕಾರಿಗಳ ಅನುಮತಿ ಪಡೆದಿಲ್ಲ ಎಂದರೆ ಸಾಕ್ಷಿ ನಾನೇ ಆ ದಿನ ಪ್ರಭಾರೆ ಪ್ರಾಂಶುಪಾಲನಾಗಿದ್ದೆ ಎನ್ನುತ್ತಾರೆ. ಠಾಣಾ ಆವರಣದಲ್ಲಿ ದಾಳಿ ಪೂರ್ವದ ಮಹಜರ್ ಕ್ರಮ ಜರುಗಿಸಲಾಯಿತು ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳಕ್ಕೆ ಹೋಗಲಾಯಿತು ಮತ್ತು ಅಲ್ಲಿ ಮಹಜರ್ ಕ್ರಮ ನಡೆಸಲಾಯಿತು ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಫೋಟೋ ತೆಗೆಯಲಾಯಿತು ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ಮುಬಾರಕ್ ನನ್ನ ಹಿಡಿದರು ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ದಾಳಿ ಕಾಲಕ್ಕೆ ಇನ್ನೂ ಮೂರು ಜನ ಆರೋಪಿತರು ಸ್ಥಳದಿಂದ ಓಡಿ ಹೋದರು ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಮಾಲನ್ನ ಸ್ವಾಧೀನ ಹೊಂದಿರಲಿಲ್ಲ ಮತ್ತು ಅವರ ಸ್ವಾಧೀನದಿಂದ ಯಾವುದೇ ಮಾಲನ್ನ ಅಮಾನತ್ತುಪಡಿಸಿಕೊಂಡಿಲ್ಲ, ಪೊಲೀಸರ ಮಾತು ಕೇಳಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಮಹಜರ್ ಮೇಲೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಫೋಟೋವನ್ನ ಈ ಕೇಸಿಗಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಫೋಟೋವನ್ನ ಪೊಲೀಸರು ತೆಗೆದರು, ಫೋಟೋ ತೆಗೆದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ಫೋಟೋವನ್ನ ಪೊಲೀಸರು ಮೊಬೈಲ್ ಸಹಾಯದಿಂದ ತೆಗೆದರು.

C.C.No.1245/2022
PW-2 CW-2

<u>ಪಾಟೀ ಸವಾಲುಃ ಉಳಿದ ಆರೋಪಿ ಪರಃ ವಕೀಲರಿಂದಃ-</u>

5 ನೇ ಆರೋಪಿತರ ಪರ ವಕೀಲರು ಮಾಡಲಾದ ಪಾಟೀ ಸವಾಲನ್ನ ಅಳವಡಿಸಿಕೊಂಡಿರುತ್ತಾರೆ.

<u>ಮರು ಸವಾಲುಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಓಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ